**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 1012/ 2017**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಎಂ ಎಲ್ ಮುನೀಶ | ಚಾ.ಸಾ.-6 |
| ತಂದೆ ಹೆಸರು | - | ಲೇಟ್ ಎಂ ಲಿಂಗಯ್ಯ | ಪ್ರಾ.ಸಾ.-3 |
| ವಯಸ್ಸು | - | 65 ವರ್ಷ | |
| ಉದ್ಯೋಗ | - | ನಿವೃತ್ತ ಉಪ ವ್ಯವಸ್ಥಾಪಕರು, ಮಂಡ್ಯ ಹಾಲು ಒಕ್ಕೂಟ ಗೆಜ್ಜಲಗೆರೆ | |
| ವಾಸಸ್ಥಳಃ | - | ಮೈಸೂರು | |

ದಿನಾಂಕಃ 31.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು ದಿನಾಂಕಃ 01.04.1987 ರಿಂದ 03.06.2019 ರವರೆಗೆ ಮಂಡ್ಯ ಹಾಲು ಒಕ್ಕೂಟದಲ್ಲಿ ಬೇರೆ ಬೇರೆ ಹುದ್ದೆಯಲ್ಲಿ ಕೆಲಸ ನಿರ್ವಹಿಸಿರುತ್ತೇನೆ.

ಮಾರ್ಚ್ 2015 ನೇ ಇಸವಿಯಲ್ಲಿ 145 ಹುದ್ದೆಗಳಿಗೆ ನೇಮಕಾತಿ ಪ್ರಕಟಣೆಯನ್ನು ಹೊರಡಿಸಿರುತ್ತೇವೆ. ಅದರಲ್ಲಿ ವಿಸ್ತರಣಾ ಅಧಿಕಾರಿ ದರ್ಜೆ ಮೂರು ಹುದ್ದೆಗಳಿಗೆ ಅರ್ಜಿಯನ್ನು ಕರೆದಿರುತ್ತೇವೆ. ಆ ಪೈಕಿ ಒಂದು ಹುದ್ದೆ ಮಾಜಿ ಸೈನಿಕನಿಗೆ ಮೀಸಲಾಗಿತ್ತು. ಅದರಂತೆ ಜಗದೀಶ್ ಮಡಿವಾಳ ರವರು ಆ ಹುದ್ದೆಗೆ ಅರ್ಜಿಯನ್ನು ಸಲ್ಲಿಸಿದ್ದರು, ಅರ್ಜಿಗಳ ಪರಿಶೀಲನೆಯ ನಂತರ ಆಗಸ್ಟ್ 2015 ರಲ್ಲಿ ಸಂದರ್ಶನ ಮಾಡಿ, ಸದರೀ ಹುದ್ದೆಗೆ ಮಾಜಿ ಸೈನಿಕ ಕೋಟಾದ ಅಡಿಯಲ್ಲಿ ಈ ಪ್ರಕರಣದ ಅರೋಪಿ ಆಯ್ಕೆಯಾಗಿರುತ್ತಾರೆ. ಆ ನಂತರ ಕಾರ್ಯವರದಿ ಮಾಡಿಕೊಂಡು ಕೆಲಸವನ್ನು ನಿರ್ವಹಿಸಿರುತ್ತಾರೆ. ಕಾರ್ಯವರದಿ ಮಾಡಿಕೊಂಡ ಅಂಕಪಟ್ಟಿಯ ಮೂಲ ದಾಖಲೆಗಳನ್ನು ಹಾಗೂ ಇತರೇ ದಾಖಲೆಗಳನ್ನು ಕಛೇರಿಗೆ ಸಲ್ಲಿಸಿರುತ್ತಾರೆ. ಅವರ ವಿದ್ಯಾರ್ಹತೆ ಬಿ ಎ ಪದವಿಯಾಗಿರುತ್ತದೆ. ಈ ಪದವಿಯನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರಿನಿಂದ ಪಡೆದಿರುತ್ತಾರೆ. ಅವರು ಸಲ್ಲಿಸಿರುವ ಮೂಲಕ ಅಂಕಪಟ್ಟಿಗಳ ಪರಿಶೀಲನೆಗಾಗಿ ನಮ್ಮ ಕಛೇರಿಯಿಂದ ಜೂನ್ 2016 ರಂದು ಪತ್ರ ಬರೆದಿರುತ್ತೇವೆ. ಮುಕ್ತ ವಿಶ್ವ ವಿದ್ಯಾಲಯದಿಂದ ಪತ್ರಕ್ಕೆ ಉತ್ತರ ಬಂದಿದ್ದು, ಆ ಪತ್ರದಲ್ಲಿ ರಿಜಿಸ್ಟ್ರಾರ್ ರವರು ಜಗದೀಶ್ ಮಡಿವಾಳರವರ ಅಂಕಪಟ್ಟಿಯು ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ದಾಖಲೆಗಳಲ್ಲಿ ತಾಳೆಯಾಗುತ್ತಿಲ್ಲ, ಹಾಗೂ ಇದು ನಕಲೀ ಅಂಕಪಟ್ಟಿಯೆಂದು ಉತ್ತರ ನೀಡಿರುತ್ತಾರೆ. ಈ ಪತ್ರದ ಅನುಸಾರ ಆರೋಪಿರವರಿಗೆ ಕಛೇರಿಯಿಂದ ನೋಟೀಸ್ ನ್ನು ಕೊಡಲಾಗಿರುತ್ತದೆ. ಆ

ಸಮಯದಲ್ಲಿ ಆರೋಪಿ ಪರೀಕ್ಷಾ ಪೂರ್ವ ಅವಧಿಯಲ್ಲಿ ಮುಂದುವರೆಯುತ್ತಿದ್ದರು. ಆರೋಪಿಗೆ ಸೇರಿದ ಅಂಕಪಟ್ಟಿ ನಕಲಿ ಎಂದು ದೃಢಪಟ್ಟ ನಂತರ ನಮ್ಮ ಸೇವಾ ನಿಯಮಗಳನುಸಾರ ಅವರನ್ನು ಸೇವೆಯಿಂದ ವಜಾ ಮಾಡಲಾಗಿರುತ್ತದೆ. ಮುಂದುವರೆದು, ಅವರು ನೇಮಕಗೊಂಡ ದಿನಾಂಕದಿಂದ ಸೇವೆಯಿಂದ ವಜಾ ಮಾಡುವವರೆಗೆ ಕಛೇರಿಯಿಂದ ಪಡೆದಿದ್ದ ಸಂಬಳ ಮತ್ತು ಇತರೇ ಭತ್ಯೆಗಳನ್ನು ಅಂದಾಜು 02 ಲಕ್ಷ 73 ಸಾವಿರ ಹಣವನ್ನು ನಮ್ಮ ಕಛೇರಿಗೆ ಪಾವತಿಸಿರುತ್ತಾರೆ. ಆ ನಂತರ ಜುಲೈ 2016 ರಂದು ಆರೋಪಿಯನ್ನು ಸೇವೆಯಿಂದ ವಜಾ ಮಾಡಿದ್ದು, ಮತ್ತು ಅವರ ವಿರುದ್ಧ ಮದ್ದೂರು ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿರುತ್ತಾರೆ.

ಆರೋಪಿ 2 ರವರು ಜೂನಿಯರ್ ಸಿಸ್ಟಂ ಆಪರೇಟರ್ ಹುದ್ದೆಗೆ, ಒಕ್ಕೂಟಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಮೇಲೆ ಪ್ರಕಟಿಸಲಾದ ಮಾರ್ಚ್ 2015 ರ ನೇಮಕಾತಿ ಅಧಿಸೂಚನೆಯಲ್ಲಿ ಈ ಹುದ್ದೆಯು ಕೂಡ ಸೇರಿಕೊಂಡಿತ್ತು, ಅದರಂತೆ ಈ ಪ್ರಕರಣದ ಆರೋಪಿ 2 ರವರು ಅರ್ಜಿಯನ್ನು ಸಲ್ಲಿಸಿ ಅರ್ಜಿಯೊಂದಿಗೆ ಪದವಿ ವಿದ್ಯಾರ್ಹತೆಯ ದಾಖಲೆಗಳನ್ನು ಸಲ್ಲಿಸಿರುತ್ತಾರೆ. ಆ ನಂತರ ಆಗಸ್ಟ್ 2015 ರಂದು ಸಂದರ್ಶನ ಕ್ಕೆ ಹಾಜರಾಗಿರುತ್ತಾರೆ. ಸಂದರ್ಶನದಲ್ಲಿ ಆಯ್ಕೆ ಆಗಿ ಸೆಪ್ಟೆಂಬರ್ 2015 ರಂದು ನೇಮಕಾತಿ ಆದೇಶವನ್ನು ಕೊಟ್ಟಿದ್ದು, ಅದರಂತೆ ಅವರು ಕಾರ್ಯವರದಿ ಮಾಡಿಕೊಂಡು ಕೆಲಸವನ್ನು ನಿರ್ವಹಿಸಿರುತ್ತಾರೆ. ಕಾರ್ಯವರದಿ ಮಾಡಿಕೊಂಡ ನಂತರ ಅಂಕಪಟ್ಟಿಯ ಮೂಲ ದಾಖಲೆಗಳನ್ನು ಹಾಗೂ ಬಿ ಎ ಪದವಿ ಹಾಗೂ ಅಂಕಪಟ್ಟಿಗಳ ಇತರೇ ದಾಖಲೆಗಳನ್ನು ಕಛೇರಿಗೆ ಸಲ್ಲಿಸಿರುತ್ತಾರೆ. ಆ ನಂತರ ಅವರು ಸಲ್ಲಿಸಿರುವ ಮೂಲಕ ಅಂಕಪಟ್ಟಿಗಳ ನೈಜತೆಯನ್ನು ಪರಿಶೀಲಿಸಿಕೊಳ್ಳುವ ಸಲುವಾಗಿ ಅವರು ಬಿ ಎ ಪದವಿ ಪಡೆದಿದ್ದ ಶ್ರೀಧರ್ ಯುನಿವರ್ಸಿಟಿ ಪಿಲಾನಿ, ರಾಜಸ್ಥಾನ್ ರಾಜ್ಯಕ್ಕೆ ಪತ್ರವನ್ನು ಬರೆದಿರುತ್ತೇವೆ. ಈ ಪತ್ರಕ್ಕೆ ವಿಶ್ವವಿದ್ಯಾನಿಲಯದಿಂದ ಉತ್ತರ ಬಂದಿದ್ದು, ಆ ಪತ್ರದಲ್ಲಿ ಅವರು you are not at all a student of this University ಹಾಗೂ the Marks submitted by him are fake and fraud ಎಂದು ಷರಾ ಹಾಕಿ ಪತ್ರ ನೀಡಿರುತ್ತಾರೆ. ಈ ಪತ್ರದ ಅನುಸಾರ ಆರೋಪಿ 2 ರವರೂ ಕೂಡ ನಕಲಿ ಅಂಕಪಟ್ಟಿಯನ್ನು ಸಲ್ಲಿಸಿ ನಮ್ಮ ಕಛೇರಿಯಿಂದ ಜೂನಿಯರ್ ಸಿಸ್ಟಂ ಆಪರೇಟರ್ ಹುದ್ದೆಗೆ ಆಯ್ಕೆಯಾಗಿರುತ್ತಾರೆ. ಇವರಿಗೆ ಜುಲೈ 2016 ರಲ್ಲಿ ಕಛೇರಿಯಿಂದ ನೋಟೀಸ್ ಕೊಡಲಾಗಿರುತ್ತದೆ. ನಮ್ಮ ಸೇವಾನಿಯಮದನುಸಾರ ಇವರು ಪರೀಕ್ಷಾ ಪೂರ್ವ ಅವಧಿಯಲ್ಲಿ ಮುಂದುವರೆಯುತ್ತಿದ್ದುದರಿಂದ ಇವರನ್ನು ಆಡಳಿತ ಮಂಡಳಿಯ ತೀರ್ಮಾನದ ಅನುಸಾರ ಸೇವೆಯಿಂದ ವಜಾ ಮಾಡಲಾಗಿರುತ್ತದೆ. ಇದಲ್ಲದೇ, ಅವರು ಕೆಲಸಕ್ಕೆ ಸೇರಿಕೊಂಡ ದಿನಾಂಕದಿಂದ ಸೇವೆಯಿಂದ ವಜಾ ಆಗುವ ತನಕ ಕಛೇರಿಯಿಂದ ಪಡೆದಿದ್ದ ವೇತನ ಮತ್ತು

ಇತರೇ ಭತ್ಯೆಗಳ ಬಾಬ್ತು ಅಂದಾಜು 2 ಲಕ್ಷ 23 ಸಾವಿರ ಹಣವನ್ನು ಒಕ್ಕೂಟಕ್ಕೆ ಪಾವತಿಸಿರುತ್ತಾರೆ. ಇವರನ್ನು ಸೇವೆಯಿಂದ ವಜಾ ಮಾಡಿದ ನಂತರ ಇವರ ವಿರುದ್ಧ ಕೂಡ ಮದ್ದೂರು ಆರಕ್ಷಕ ಠಾಣೆಯಲ್ಲಿ ಕ್ರಿಮಿನಲ್ ದೂರನ್ನು ದಾಖಲಿಸಿ, ಆ ಸಂಬಂಧ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ವಕೀಲರುಃ ಶ್ರೀ ಹೆಚ್ ಡಿ ಆರ್ ರವರಿಂದ**

ವಿವಿಧ ಹುದ್ದೆಗಳಿಗೆ ಅಧಿಸೂಚನೆಯನ್ನು ಪ್ರಕಟಿಸಲಾದ ಸಂದರ್ಭದಲ್ಲಿ ನಾನು ಹಾಲು ಒಕ್ಕೂಟದಲ್ಲಿ ಆಡಳಿತ ವಿಭಾಗದಲ್ಲಿ ಸಹಾಯಕ ವ್ಯವಸ್ಥಾಪಕನಾಗಿ, ಕರ್ತವ್ಯ ನಿರ್ವಹಿಸುತ್ತಿದ್ದೆ. ವಿಸ್ತರಣಾಧಿಕಾರಿ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಪದವಿಯನ್ನು ಹಾಗೂ ಕಂಪ್ಯೂಟರ್ ಜ್ಞಾನ ಅವಶ್ಯಕತೆ ಇತ್ತು ಎಂದು ವಿದ್ಯಾರ್ಹತೆಯನ್ನು ನಿಗಧಿಪಡಿಸಲಾಗಿತ್ತು. ಯಾವುದೇ ಒಂದು ಹುದ್ದೆಗೆ ಅರ್ಜಿಯನ್ನು ಸಲ್ಲಿಸಬೇಕಾದರೆ, ಸದರೀ ಅಭ್ಯರ್ಥಿಯ ಎಸ್ ಎಸ್ ಎಲ್ ಸಿ, ದ್ವಿತೀಯ ಪಿಯುಸಿ ಮತ್ತು ಪದವಿಯ ಅಂಕಪಟ್ಟಿಗಳು ಸಲ್ಲಿಸತಕ್ಕದ್ದು ಎಂಬುದಾಗಿ ಶರತ್ತನ್ನು ವಿಧಿಸಿರುತ್ತೀರಿ ಎಂದರೆ ಸರಿ. ಆರೋಪಿ 1 ರವರು ಸದರೀ ಹುದ್ದೆಗೆ ಅರ್ಜಿಯನು ಸಲ್ಲಿಸುವ ಸಂದರ್ಭದಲ್ಲಿ ಈ ಮೇಲೆ ತಿಳಿಸಿದ ಎಲ್ಲಾ ಅಂಕಪಟ್ಟಿಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸಿದ್ದರು ಎಂದರೆ ಸರಿ. ಸಂದರ್ಶನ ಕರೆಯುವ ಮೊದಲು ಎಲ್ಲಾ ಅಭ್ಯರ್ಥಿಗಳ ದಾಖಲೆಗಳನ್ನು ಒಮ್ಮೆ ಪರಿಶೀಲನೆ ಮಾಡಿರುತ್ತೀರಿ ಎಂದರೆ ಸರಿ. ಮಾಜೀ ಸೈನಿಕನ ಮೀಸಲಾಗಿದ್ದ ಹುದ್ದೆಗೆ ಎಷ್ಟು ಜನ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಜನ ಮಾಜಿ ಸೈನಿಕರನ್ನು ಸಂದರ್ಶನಕ್ಕಾಗಿ ಕರೆದಿದ್ದೀರಿ ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ, ದಾಖಲೆಯನ್ನು ನೋಡಿ ಹೇಳಬೇಕೆಂದು ನುಡಿಯುತ್ತಾರೆ. ಅಭ್ಯರ್ಥಿಗಳು ಸಂದರ್ಶನಕ್ಕೆ ಬಂದ ಸಂದರ್ಭದಲ್ಲಿ ಮೂಲ ದಾಖಲೆಗಳನ್ನು ತೆಗದುಕೊಂಡು ಬರಬೇಕೆಂಬುದಾಗಿ ತಿಳಿಸಿರುತ್ತೀರಿ ಎಂದರೆ ಸರಿ. ಸಂದರ್ಶನ ಸಮಯದಲ್ಲಿ ಆರೋಪಿ 1 ರವರು ಹಾಜರುಪಡಿಸಿದ್ದ, ದಾಖಲೆಗಳನ್ನು ಅವರು ಅರ್ಜಿಯನ್ನು ಸಲ್ಲಿಸಿದ್ದ ಸಂದರ್ಭದಲ್ಲಿ ಸಲ್ಲಿಸಿದ್ದ ದೃಢೀಕೃತ ಪ್ರತಿಗಳೊಂದಿಗೆ ಹೋಲಿಕೆ ಮಾಡಿ ನೋಡಿರುತ್ತೀರಿ ಎಂದರೆ ಸರಿ. ಆ ಸಮಯದಲ್ಲಿ ಆರೋಪಿ ಹಾಜರುಪಡಿಸಿದ್ದ ದಾಖಲೆಗಳು ನಕಲಿ ಎಂಬುದರ ಬಗ್ಗೆ ನೀವು ಯಾವುದೇ ಶರಾ ಬರೆದಿರುವುದಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ, ನಂತರ ಸಾಕ್ಷಿ ಮುಂದುವರೆದು, ನಾವು ಮೂಲ ಅಂಕಪಟ್ಟಿಗಳನ್ನು ಅಭ್ಯರ್ಥಿ ಸಲ್ಲಿಸಿದ್ದ ದೃಢೀಕೃತ ಪ್ರತಿಗಳೊಂದಿಗೆ ಹೋಲಿಕೆ ಮಾಡಲು ಮಾತ್ರ ತೆಗೆದುಕೊಂಡು ಬರಬೇಕೆಂಬುದಾಗಿ ತಿಳಿಸಿರುತ್ತೇವೆಂದು ನುಡಿಯುತ್ತಾರೆ. ಸಂದರ್ಶನ ಕರೆದ ಸಮಯಕ್ಕೂ ಮತ್ತು ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ ಸಮಯಕ್ಕೂ ಅಂತರ 1 ತಿಂಗಳು ಇತ್ತು.

ಅಂತಿಮ ಆಯ್ಕೆ ಪಟ್ಟಿಯನ್ನು ಸಲ್ಲಿಸುವ ಮೊದಲು ನೀವು ಅಭ್ಯರ್ಥಿಗಳಿಗೆ ಸಂಬಂದಿಸಿದ ದಾಖ್ಲೆಗಳು ಅಸಲೀ ದಾಖಲೆಗಳಾ ಎಂದು ತಿಳಿದುಕೊಳ್ಳಲು ಸಂಬಂಧಪಟ್ಟ ಇಲಾಖೆಗಳೊಂದಿಗೆ ಪತ್ರ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿ.  ನಂತರ ಸಾಕ್ಷಿ ಮುಂದುವರೆದು, ಆ ಸಮಯದಲ್ಲಿ ಒಟ್ಟು 125 ಅಭರ್ಥಿಗಳು ವಿವಿಧ ಹುದ್ದೆಗಳಿಗೆ ಆಯ್ಕೆಯಾಗಿದ್ದ ಕಾರಣ, ನಾವು ಒಂದು ತಿಂಗಳ ಅವಧಿಯಲ್ಲಿ ಪರಿಶೀಲನೆ ಮಾಡಿರುವುದಿಲ್ಲ.

ನೀವು ಆರೋಪಿ 1 ರವರಿಗೆ ಸೇರಿದ ಎಸ್ ಎಸ್ ಎಲ್ ಸಿ ಮತ್ತು ದ್ವಿತೀಯ ಪಿಯುಸಿ ಅಂಕಪಟ್ಟಿಗಳು ಅಸಲಿಯಾ ಅಥವಾ ನಕಲಿಯಾ ಎಂಬುದರ ಬಗ್ಗೆ ನೀವು ಯಾವುದೇ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿ.  ನಂತರ ಸಾಕ್ಷಿ ಮುಂದುವರೆದು, ಆರೋಪಿ 1 ರವರು ಆಯ್ಕೆಯಾಗಿದ್ದ ಹುದ್ದೆ, ಪದವಿ ವಿದ್ಯಾರ್ಹತೆಯನ್ನು ನಿಗಧಿಪಡಿಸಿದ್ದ ಕಾರಣ ಅದನ್ನು ಮಾತ್ರ ಪರಿಶೀಲನೆ ಮಾಡಿರುತ್ತೇವೆಂದು ನುಡಿಯುತ್ತಾರೆ.  ನಾನು, ನಮ್ಮ ಇಲಾಖೆಯಲ್ಲಿ 32 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿರುತ್ತೇನೆ.  ಯಾವುದೇ ಒಂದು ಹುದ್ದೆಗೆ ಆಯ್ಕೆ ಮಾಡಿದ ನಂತರ ಸದರೀ  ಅಭ್ಯರ್ಥಿಯ ಎಸ್ ಎಸ್ ಎಲ್ ಸಿ ಅಂಕಪಟ್ಟಿ ಅಸಲಿಯಾ ಅಥವಾ ನಕಲಿಯಾ ಎಂಬುದರ ಬಗ್ಗೆ ನೀವು ಪರಿಶೀಲನೆ ಮಾಡಬೇಕೆಂದರೆ ಸಾಕ್ಷಿ ಆ ರೀತಿಯಾಗಿ ಯಾವುದೇ ನಿಯಮ ಇಲ್ಲ ಎಂದು ನುಡಿಯುತ್ತಾರೆ.  ಆ ರೀತಿಯಾಗಿ ನಿಯಮ ಇದ್ದರೂ ಕೂಡ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಆರೋಪಿ 1 ರವರಿಗೆ ಸೇರಿದ ಪದವಿ ಅಂಕಪಟ್ಟಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಸಂದರ್ಭದಲ್ಲಿ ಮೂಲ ಅಂಕಪಟ್ಟಿಗಳನ್ನು ಕಳುಹಿಸಿರುವುದಿಲ್ಲ ಎಂದರೆ ಸರಿ.  ಸಾಕ್ಷಿ ಮುಂದುವರೆದು, ಸದರೀ ಅಂಕಪಟ್ಟಿಗಳ ಜೆರಾಕ್ಸ್ ಪ್ರತಿಗಳನ್ನು ಪರಿಶೀಲನೆಗಾಗಿ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುತ್ತೇವೆಂದು ನುಡಿಯುತ್ತಾರೆ.  ಮೂಲ ಅಂಕಪಟ್ಟಿಗಳಿಲ್ಲದೇ, ಜೆರಾಕ್ಸ್ ಪ್ರತಿಗಳಿಂದ ಅಂಕಪಟ್ಟಿಗಳನ್ನು ಪರಿಶೀಲಿಸಲು ಸಾಧ್ಯವಿಲ್ಲ ಎಂಬುದಾಗಿ ವಿಶ್ವವಿದ್ಯಾಲಯುದವರು ನಿಮಗೆ ಪ್ರತ್ಯುತ್ತರವನ್ನು ನೀಡಿರುತ್ತಾರೆಂದರೆ ಸರಿಯಲ್ಲ.  ಆರೋಪಿ ತಮ್ಮ ಹುದ್ದೆಗೆ ಕಾರ್ಯವರದಿ ಮಾಡಿಕೊಂಡ ಸಂದರ್ಭದಲ್ಲಿ ಅವರು ಪದವಿಗೆ ಸೇರಿದ ಮೂಲ ಅಂಕಪಟ್ಟಿಗಳನ್ನು ನಿಮ್ಮ ಒಕ್ಕೂಟಕ್ಕೆ ಸಲ್ಲಿಸಿರುತ್ತಾರೆಂದರೆ ಸರಿ.  ಸದರೀ ಅಂಕಪಟ್ಟಿಗಳು ಈಗಲೂ ಕೂಡ ನಿಮ್ಮ ಒಕ್ಕೂಟದ ಕಛೇರಿಯಲ್ಲಿಯೇ ಇವೆಯೆಂದರೆ ಸರಿಯಲ್ಲ.  ನಂತರ ಸಾಕ್ಷಿ ಮುಂದುವರೆದು ಕ್ರಿಮಿನಲ್ ಪ್ರಕರಣ ದಾಖಲಾದ ಕಾರಣ ಸದರೀ ಅಂಕಪಟ್ಟಿಗಳ ಮೂಲ ದಾಖಲೆಗಳು ಪೋಲೀಸರ ವಶದಲ್ಲಿವೆಯೆಂದು ನುಡಿಯುತ್ತಾರೆ.  ನಿಮ್ಮ ಸಹಿಯ ಮೂಲಕ ವಿಶ್ವವಿದ್ಯಾಲಯಕ್ಕೆ  ಅಂಕಪಟ್ಟಿಗೆ ಸಂಬಂಧಪಟ್ಟಂತೆ ಯಾವುದೇ ಪತ್ರ ಹೋಗಿಲ್ಲ  ಎಂದರೆ ಸರಿ. ನಂತರ ಸಾಕ್ಷಿ ಮುಂದುವರೆದು, ಕಛೇರಿಯ ಮುಖ್ಯಸ್ಥರ ಅಂದರೆ ವ್ಯವಸ್ಥಪಕ ನಿರ್ದೇಶಕರ

ಮೂಲಕ ಹೋಗಿರುತ್ತದೆಯೆಂದು ನುಡಿಯುತ್ತಾರೆ. ಆರೋಪಿಗೆ ಸಂಬಂಧಪಟ್ಟ ಅಂಕಪಟ್ಟಿಗಳಿಗೆ ಸಂಬಂಧಪಟ್ಟಂತೆ ನಿಮ್ಮ ಮೂಲಕ ಯಾವುದೇ ಪತ್ರವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಸಲ್ಲಿಸಿದ್ದ ಪದವಿ ಅಂಕಪಟ್ಟಿಗಳು ಅಸಲೀ ಅಂಕಪಟ್ಟಿಗಳಾಗಿರುತ್ತವೆಯೆಂದರೆ ಸರಿಯಲ್ಲ. ನೀವು ಆರೋಪಿತರನ್ನು ಸೇವೆಯಿಂದ ತೆಗೆದುಹಾಕುವ ಸಲುವಾಗಿ ಸುಳ್ಳು ಅಂಕಪಟ್ಟಿಗಳನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಹಾಲು ಒಕ್ಕೂಟದಲ್ಲಿ ಕಾರ್ಮಿಕರ ಹಿತರಕ್ಷಣೆಗಾಗಿ ಸಂಘಗಳು ಇವೆಯೆಂದರೆ ಸರಿ. ಸದರೀ ಸಂಘದಲ್ಲಿ ಎರಡು ಗುಂಪುಗಳಿವೆಯೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಒಕ್ಕೂಟದಲ್ಲಿ ಉತ್ತರ ಕರ್ನಾಟಕದವರು ಮತ್ತು ದಕ್ಷಿಣ ಕರ್ನಾಟಕದವರು ಎಂಬುದಾಗಿ ಎರಡು ಸಂಘಗಳಿವೆಯೆಂದರೆ ಸರಿಯಲ್ಲ. ನೀವು ಒಂದು ಗುಂಪಿನ ಕಾರ್ಮಿಕರ ಸಂಘದ ಒತ್ತಡಕ್ಕೆ ಮಣಿದು ಆರೋಪಿಯನ್ನು ಸೇವೆಯಿಂದ ವಜಾ ಮಾಡಿದ್ದೀರಿ ಎಂದರೆ ಸರಿಯಲ್ಲ. ನಂತರ ಸಾಕ್ಷಿ ಮುಂದುವರೆದು, ಇದರಲ್ಲಿ ಕಾರ್ಮಿಕ ಸಂಘದ ಪಾತ್ರ ಏನೂ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಮಕ್ಷಮದಲ್ಲಿ ಆರೋಪಿಗೆ ಸಂಬಂಧಪಟ್ಟ ದಾಖಲೆಗಳು, ಪೋಲೀಸರು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಒಕ್ಕೂಟಕ್ಕೆ ಅಸಲೀ ದಾಖಲೆಗಳನ್ನು ನೀಡಿದ್ದರೂ ಕೂಡ ನಕಲೀ ದಾಖಲೆಗಳು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಲೀಸರು ನಿಮ್ಮನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಚಾ,ಸಾ. 1 ರವರು ನಿಮ್ಮ ಇಲಾಖೆಯವರೇ ಆದ ಕಾರಣ ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಆರೋಪಿ 2 ರವರ ಪರ ವಕೀಲರು ಆರೋಪಿ 1 ರವರ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡ ಕಾರಣ ಅಳವಡಿಸಿಕೊಂಡಿರುತ್ತೇನೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.